ಅವರ ಜೀವನ ನಿರ್ವಹಣೆ ಕಷ್ಟವಾಗಿದೆ. ಆದ್ದರಿಂದ, ದಯಮಾಡಿ ಇವರಿಗೆ ಒಂದು ವ್ಯವಸ್ಥೆಯನ್ನು ಕಲ್ಪಿಸಿ ಅವರ ಆತ್ಮಗೌರವವನ್ನು ಕಾಪಾಡಬೇಕಾಗಿರುವುದು ಸರ್ಕಾರದ ಕರ್ತವ್ಯವಾಗಿದೆ. ಆದ್ದರಿಂದ, ಈ ವಿಚಾರವನ್ನು ಅತೀ ಜರೂರೆಂದು ಸರ್ಕಾರ ತಿಳಿದುಕೊಂಡು ಬಹಳ ಸೂಕ್ಷ್ಮತೆಯಿಂದ ಈ ವಿಚಾರವನ್ನು ಬಗೆಹರಿಸುವ ನಿಟ್ಟಿನ ಬಗ್ಗೆ ಸರ್ಕಾರದವರಿಂದ ಉತ್ತರ ಬಯಸುತ್ತೇನೆ.

ಶ್ರೀ ಬಂಡೆಪ್ಪ ಕಾಶೆಂಪೂರ್ :– ಸನ್ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಾದ ಶಿವಲಿಂಗೇಗೌಡರು ಹೇಳಿರುವುದು ನಿಜವಿದೆ. ಜೂನ್ 16 ನೇ ತಾರೀಖಿನ ದಿವಸ ನಡೆದಂಥ ಸಂಪುಟ ಸಭೆಯಲ್ಲಿ ಮೊರಾರ್ಜಿದೇಸಾಯಿ ವಸತಿ ಶಾಲೆಗಳಲ್ಲಿನ 468 ಶಿಕ್ಷಕರ ಸೇವೆಯನ್ನು ಖಾಯಂ ಮಾಡುವ ಬಗ್ಗೆ ಸಂಪುಟ ಸಭೆಯಲ್ಲಿ ನಿರ್ಧಾರ ತೆಗೆದುಕೊಂಡಿದೆ ಎಂದು ಪತ್ರಿಕೆಯಲ್ಲಿ ಬಂದಿದೆ. ಮತ್ತೆ ಏಕೆ ಹಿಂದೇಟು ಹಾಕುತ್ತಿದ್ದೀರಿ? ಚುನಾವಣೆ ಬಂತ್ತೆಂದು ಈ ರೀತಿಯಾಗಿ ಮಾಡುತ್ತಿದ್ದಾರೋ ಅಥವಾ ಇಲ್ಲವೋ ಎಂಬ ಬಗ್ಗೆ ನಮಗೆ ಗೊತ್ತಿಲ್ಲ.

ಶ್ರೀ ಜಗದೀಶ್ ಶೆಟ್ಟರ್ :– ಇದರ ಬಗ್ಗೆ ಮಾನ್ಯ ಸಮಾಜ ಕಲ್ಯಾಣ ಸಚಿವರ ಕಡೆಯಿಂದ ಸ್ಪಷ್ಟವಾದ ಉತ್ತರವನ್ನು ನಾಳೆ ದಿವಸ ಕೊಡಿಸುತ್ತೇವೆ.

ಅಧ್ಯಕ್ಷರು :– ಈಗ ನಿಯಮ 69 ರ ಮೇರೆಗೆ ಚರ್ಚೆ.

ಶ್ರೀ ಯು. ಟಿ. ಖಾದರ್ :– ಮಾನ್ಯ ಅಧ್ಯಕ್ಷರೆ, ಲಿಖಿತ ಮೂಲಕ ಉತ್ತರಿಸುವ ಎಲ್ಲಾ ಪ್ರಶ್ನೆಗಳಿಗೆ ಸರಿಯಾಗಿ ಉತ್ತರ ಬರುತ್ತಿಲ್ಲ.

ಅಧ್ಯಕ್ಷರು :– ಎಲ್ಲಾ ಪ್ರಶ್ನೆಗಳಿಗೆ ಉತ್ತರ ಕೊಡಬೇಕೆಂದು ನಾನು ಹೇಳಿದ್ದೇನೆ.

ಶ್ರೀ ಯು. ಟಿ. ಖಾದರ್ :– ಟೇಬಲ್ ಮಾಡಿದ ಎಲ್ಲಾ ಪ್ರಶ್ನೆಗಳಿಗೆ ಉತ್ತರ ಬಂದಿಲ್ಲ. ಇದರಲ್ಲಿರುವ ಅರ್ಧಂಬರ್ಧ ಪ್ರಶ್ನೆಗಳಿಗೆ ಮಾತ್ರ ಉತ್ತರ ಬರುತ್ತಿದೆ.

ಅಧ್ಯಕ್ಷರು :– ಕೊಡುವುದಕ್ಕೆ ಹೇಳಿದ್ದೇನೆ.

ಮಂತ್ರಿಗಳ ಹೇಳಿಕೆ

ವಿಷಯ :– ಸಿಇಟಿ ಗೊಂದಲದ ಬಗ್ಗೆ :

ಶ್ರೀ ಅರವಿಂದ ಲಿಂಬಾವಳಿ (ಉನ್ನತ ಶಿಕ್ಷಣ ಸಚಿವರು) :– ಮಾನ್ಯ ಅಧ್ಯಕ್ಷರೆ, ಮಾನ್ಯ ವಿರೋಧಪಕ್ಷದ ನಾಯಕರು ಸಿಇಟಿ ಬಗ್ಗೆ ನಿನ್ನೆ ದಿವಸ ಪ್ರಸ್ತಾಪ ಮಾಡಿದ್ದರು. ಅದಕ್ಕೆ ಈಗ ಉತ್ತರ ಕೊಡುವುದಕ್ಕೆ ಬಯಸುತ್ತೇನೆ. ಇದರ ಬಗ್ಗೆ ಬಹಳ ದೊಡ್ಡ ಒಂದು ಗೊಂದಲವನ್ನು AICTE ರವರು ಮಾಡಿದ್ದರು. ನೆನ್ನೆದಿವಸ ನಮ್ಮ ಅಧಿಕಾರಿಗಳನ್ನು ದೆಹಲಿಗೆ ಕಳುಹಿಸಿಕೊಟ್ಟಿದ್ದೆ. ತಮಗೆ ಗೊತ್ತಿರುವ ಹಾಗೆ ಯಾವುದೇ ರೀತಿಯ ಕೋರ್ಸ್‌ಗಳಿಗೆ

ಸಂಬಂಧಪಟ್ಟಂತೆ ಅವರು 24 ಕಾಲೇಜುಗಳಿಗೆ ಅನುಮತಿಯನ್ನು ಕೊಟ್ಟಿರಲಿಲ್ಲ. ಮತ್ತೆ ಇದರ ಬಗ್ಗೆ ಅವರ ವೆಬ್‌ಸೈಟ್‌ನಲ್ಲಿ ಮಾಹಿತಿಗಳು ಕೂಡ ಇರಲಿಲ್ಲ. ಅದೇ ರೀತಿಯಾಗಿ 13 ಕಾಲೇಜುಗಳಿಗೆ ಪಾರ್ಷಿಯಲ್ ಆಗಿ ಅನುಮತಿಯನ್ನು ಕೊಟ್ಟಿರುವ ಮಾಹಿತಿ ವೆಬ್‌ಸೈಟ್‌ನಲ್ಲಿತ್ತು. ಅವರು ಈ ರೀತಿಯಾದ ಒಂದು ಗೊಂದಲ ಮಾಡಿದ್ದರು. ನಾನು ಹಿಂದೆ Education Ministers Conference ನಲ್ಲಿ ಮಾನ್ಯ ಹೆಚ್.ಆರ್.ಡಿ. ಸಚಿವರನ್ನು ಭೇಟಿ ಮಾಡಿದ್ದೆ. ಮತ್ತೆ ಮೊನ್ನೆ ದಿವಸ ವಿಶೇಷವಾಗಿ ಈ ವಿಷಯಕ್ಕೆ ಸಂಬಂಧಪಟ್ಟಂತೆ ಅವರನ್ನು ಭೇಟಿ ಮಾಡಿ ಬಂದಿದ್ದೆ. 28 ನೇ ತಾರೀಖಿನೊಳಗೆ ಕ್ಲಿಯರ್ ಮಾಡುತ್ತೇವೆಂದು ಆ ಸಂದರ್ಭದಲ್ಲಿ ಹೇಳಿದ್ದರು. ಅನಿವಾರ್ಯಕಾರಣಗಳಿಂದ ಅವರಿಗೆ ಮಾಡುವುದಕ್ಕೆ ಆಗಿರಲಿಲ್ಲ. ಅನಿವಾರ್ಯ ಎಂದು ಹೇಳುವುದಕ್ಕಿಂಥ ಅಲ್ಲಿರುವಂಥ ಗೊಂದಲದ ಕಾರಣದಿಂದ ಮಾಡಿರುವುದಕ್ಕೆ ಆಗಿರಲಿಲ್ಲ. ನಿನ್ನೆ ದಿವಸ ನಾನು AICTE Chairman ಜೊತೆಯಲ್ಲಿ ಮಾತನಾಡಿದೆ. ನಮ್ಮ ಅಧಿಕಾರಿಗಳನ್ನು ಭೇಟಿ ಮಾಡುವುದಕ್ಕೆ ದೆಹಲಿಗೆ ಕಳುಹಿಸಿದ್ದೆ, ಅದರ ಪ್ರತಿಫಲವಾಗಿ AICTE ಯವರು ಈಗ 2009–10 ನೇ ಸಾಲಿಗೆ ಏನು intake ಇತ್ತು ಆ ಕಾಲೇಜುಗಳಿಗೆ ಆ intake ಮೇಲೆಯೇ ತಾವು ಮುಂದುವರೆಯಬಹುದು ಎನ್ನವಂಥ ಅನುಮತಿಯನ್ನು ಇಡೀ ದೇಶಕ್ಕೆ ಕೊಟ್ಟಿದ್ದಾರೆ. ನಮ್ಮ ಕರ್ನಾಟಕದ ಪ್ರಯತ್ನದ ಫಲವಾಗಿ AICTE ಯವರು ಮಾಡಿರುವ ಗೊಂದಲ ಮತ್ತು ಅವರ ಅನಾನುಭವದಿಂದ ನಮಗೆ ತೊಂದರೆಯಾಗಿತ್ತು, ಆ ಸಮಸ್ಯೆ ಈಗ ನಿವಾರಣೆಯಾಗಿದೆ ಎನ್ನುವುದನ್ನು ಈ ಸದನಕ್ಕೆ ತಿಳಿಸುವುದಕ್ಕೆ ಬಯಸುತ್ತೇನೆ.

5. ನಿಯಮ–69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಮುಂದುವರೆದ ಅಲ್ಪ ಕಾಲಾವಧಿ ಚರ್ಚೆ :

ಲೋಕಾಯುಕ್ತರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಿರುವ ಬಗ್ಗೆ

ಶ್ರೀ ಟಿ. ಬಿ. ಜಯಚಂದ್ರ (ತಿರಾ) :– ಮಾನ್ಯ ಅಧ್ಯಕ್ಷರೆ, ಲೋಕಾಯುಕ್ತರ ರಾಜೀನಾಮೆಯ ಹಿನ್ನೆಲೆಯಲ್ಲಿ ನಿಯಮ 69 ರ ಅಡಿಯಲ್ಲಿ ಚರ್ಚೆಯನ್ನು ಪ್ರಾರಂಭ ಮಾಡಿ ನಾನು ಅರ್ಧಕ್ಕೆ ನಿಲ್ಲಿಸಿದ್ದೆ. ನಾನು ಇನ್ನೇನು ಮಾಡಬೇಕೆನ್ನುವ ಹಂತದಲ್ಲಿರುವಾಗ ಹೊಸ ಹೊಸ ವಿಚಾರಗಳು ಕೂಡ ಇವತ್ತು ಬೆಳಕಿಗೆ ಬರುತ್ತಿವೆ. ಮಾನ್ಯ ರಾಜ್ಯಪಾಲರು ಸಂದೇಶವನ್ನು ಕಳುಹಿಸಿದ್ದಾರೆ. ರಾಜ್ಯಪಾಲರು ಕಳುಹಿಸಿರತಕ್ಕಂಥ ಸಂದೇಶ ಈಗಾಗಲೇ ನಮ್ಮ ವಿರೋಧ ಪಕ್ಷದ ನಾಯಕರು ಪ್ರಸ್ತಾಪ ಮಾಡಿದಾಗ ಬಂದಿದೆ ಎನ್ನವಂಥ ವಿಷಯವನ್ನು ತಾವು ಹೇಳಿದಿರಿ. ಆ ಸಂದೇಶ ಏನು ನಮ್ಮ ನಿಯಮಾವಳಿಗಳ ಪ್ರಕಾರ, ರಾಜ್ಯಪಾಲರಿಂದ